MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.47 ENGLISH DAILY Subscription Yearly - Rs. - TUESDAY 15-3-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

**ಮಲೇಶ್ಯಾದ ಫೆಬ್ರವರಿ 2022 ರ ಪಾಮೆಣ್ಣೆ ದಾಸ್ತಾನು 10 ತಿಂಗಳ ಕನಿಷ್ಠ ಮಟ್ಟಕ್ಕೆ**

ಮಲೇಶ್ಯಾದ ಫೆಬ್ರವರಿ 2022 ಅಂತ್ಯದ ಪಾಮೆಣ್ಣೆ ದಾಸ್ತಾನು ಹಿಂದಿನ 10 ತಿಂಗಳುಗಳಲ್ಲಿ ಕನಿಷ್ಠ ಮಟ್ಟಕ್ಕೆ ಇಳಿದಿದೆಯೆನ್ನಲಾಗಿದೆ.

**ಸೋಯಾಬೀನ್ ದರ ಹೆಚ್ಚಳ**

ಕಪ್ಪು ಸಮುದ್ರ ಪ್ರದೇಶದಿಂದ ಸೂರ್ಯಕಾಂತಿ ಹಾಗೂ ಇದರ ಎಣ್ಣೆ ಜಾಗತಿಕ ಪೂರೈಕೆ ನಿಂತಿರುವುದರಿಂದ ಪರ್ಯಾಯವಾಗಿ ಸೋಯಬೀನ್ ಹಾಗೂ ಅದರ ಎಣ್ಣೆಗೂ ಜಾಗತಿಕ ಬೇಡಿಕೆ ಹೆಚ್ಚಳದಿಂದ ಹಾಗೂ ಉತ್ಪಾದನೆ ಇಳಿಕೆಯಿಂದ ಪೂರೈಕೆ ಬಿಗುವಿನಿಂದ ಸೋಯಬೀನ್ ಹಾಗೂ ಅದರ ಎಣ್ಣೆ ದರಗಳು ದಾಖಲೆ ಹೆಚ್ಚಳವಾಗಿವೆ.

**ಜೋಳ ಗೋಧಿ ದರ ಹೆಚ್ಚಳ**

ಜಾಗತಿಕ ಬೇಡಿಕೆ ಹೆಚ್ಚಳದಿಂದ ಗೋಧಿ, ಜೋಳ ಜಾಗತಿಕ ದರಗಳು ಹಾಗೂ ದೇಶೀ ದರಗಳೂ ಗಣನೀಯ ಪ್ರಮಾಣದ ಹೆಚ್ಚಳ ಕಂಡಿದೆ ಹಾಗೂ ದರಗಳು ಏರುಗತಿಯಲ್ಲಿದೆ.

**ಪಶು, ಪಕ್ಷಿ ಆಹಾರ ತಯಾರಿಕೆಯಲ್ಲಿ ಕಡಿ(Broken) ಅಕ್ಕಿ ಬಳಕೆ ದರ ಹೆಚ್ಚಳ**

ಪಶು, ಪಕ್ಷಿ ಆಹಾರ ಘಟಕಗಳಾದ ಜೋಳ, ಸೋಯಾಬೀನ್ ದರಗಳು ತೀವ್ರ ಹೆಚ್ಚಳಗೊಂಡಿರುವುದರಿಂದ, ಆಹಾರ ತಯಾರಕರು ಪರ್ಯಾಯವಾಗಿ, ಗೋಧಿ ಹಾಗೂ ಕಡಿ ಅಕ್ಕಿ **(Broken Rice)** ಬಳಸಲಾರಂಭಿಸಿರುವುದರಿಂದ ಹಾಗೂ ಅಕ್ಕಿ, ಗೋಧಿ ರಫ್ತು ಬೇಡಿಕೆಯೂ ಹೆಚ್ಚಳವಾಗಿರುವುದರಿಂದ, ಅಕ್ಕಿ ಹಾಗೂ ಗೋಧಿ ದರಗಳು ಹೆಚ್ಚಳಗೊಂಡಿದ್ದು, ಹೆಚ್ಚಳವಾಗುತ್ತಿದೆ.

**ಪಾಮೆಣ್ಣೆ ಫ್ಯೂಚರ್ ದರ ಇಳಿಕೆ**

ಜಾಗತಿಕ ಕಚ್ಚಾ ದರ ಇಳಿಕೆ ಹಾಗೂ ದಲಿಯನ್ ಹಾಗೂ ನ್ಯೂಯಾರ್ಕ ಮಾರುಕಟ್ಟೆಗಳಲ್ಲಿ ಪರ್ಯಾಯ ಖಾದ್ಯತೈಲ ದರ ಇಳಿಕೆಯಿಂದ ಪಾಮೆಣ್ಣೆ ಫ್ಯೂಚರ್ ದರ 7 ಶೇಕಡಾ ಇಳಿಕೆ ಕಂಡಿದೆ.